11) ನಾರ್ಥ್ ಈಸ್ಟ್ ಎನ್.ಆರ್. ಮೊಹಲ್ಲಾ	2 ಪಾರ್ಕ್‌ಗಳು
12) ಹೆಬ್ಬಾಳ್ 1, 2 ಮತ್ತು 3ನೇ ಹಂತ ಹುಡ್ಕೋ	13 ಪಾರ್ಕ್‌ಗಳು
13) ಚಿಕ್ಕಹರದನಹಳ್ಳಿ 1 ಮತ್ತು 2ನೇ ಹಂತ	3 ಪಾರ್ಕ್‌ಗಳು
14) ಬೋಗಾದಿ 1, 2 ಹುಡ್ಕೋ	2 ಪಾರ್ಕ್‌ಗಳು
15) ವಿಜಯನಗರ 1, 2, 3 ಹಂತ	16 ಪಾರ್ಕ್‌ಗಳು
ಒಟ್ಟು	**73 ಪಾರ್ಕ್‌ಗಳು**

ಈ) ಮೂಲತಃವಾಗಿ ಈ ಪಾರ್ಕ್‌ಗಳನ್ನು ಸಂಪೂರ್ಣ ಅಭಿವೃದ್ಧಿಪಡಿಸಿದ ನಂತರ ಕೇವಲ ನಿರ್ವಹಣೆಗಾಗಿ ನಗರಪಾಲಿಕೆಗೆ ಹಸ್ತಾಂತರಿಸಬೇಕಾದದ್ದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಕರ್ತವ್ಯ, ಆದರೆ ನಗರಾಭಿವೃದ್ಧಿ ಪ್ರಾಧಿಕಾರವು ಗ್ರೀಲ್ ನಿರ್ಮಿಸುವುದು ಬಿಟ್ಟರೆ ಯಾವುದೇ ಪಾರ್ಕನ್ನು ಅಭಿವೃದ್ಧಿ ಪಡಿಸಿರುವುದಿಲ್ಲ. ಆದರೂ ಸಹ ನಗರಪಾಲಿಕೆ ಹಸ್ತಾಂತರಿಸಿಕೊಂಡ ಮೇಲೆ ಈ ಬಡಾವಣೆಯಲ್ಲಿ ಇರುವ 181 ಪಾರ್ಕ್‌ಗಳ ಪೈಕಿ 108 ಪಾರ್ಕ್‌ಗಳನ್ನು ಅಭಿವೃದ್ಧಿಪಡಿಸಿ ಉಳಿದ 73 ಪಾರ್ಕ್‌ಗಳನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗಿದೆ. 2002 ರಲ್ಲಿ ಹಸ್ತಾಂತರಿಸಿದ ಬಡಾವಣೆಯ ಪಾರ್ಕ್‌ಗಳನ್ನು ಅಭಿವೃದ್ಧಿ ಪಡಿಸಲು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪತ್ರ ಬರೆಯಲಾಗಿದೆ.

ಉ) ಇದು ಸ್ಥಳೀಯ ಸಂಸ್ಥೆಯ ಆಸ್ತಿಯಾಗಿದ್ದು, ಪಾಲಿಕೆಯ ಆರ್ಥಿಕ ಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಪಾಲಿಕೆ ಕ್ರಮ ವಹಿಸಬೇಕಾಗಿರುತ್ತದೆ.

459 (875) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್ (ಚಾಮರಾಜ) :- ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಚಾಮರಾಜ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯ ಯಾವ ಯಾವ ಬಡಾವಣೆ/ಪ್ರದೇಶಗಳಲ್ಲಿ ವೋಲ್ಟೇಜ್ ಸಮಸ್ಯೆ ಇದೆ;

ಆ) ವೋಲ್ಟೇಜ್ ಸಮಸ್ಯೆ ಇರುವ ಪ್ರದೇಶಗಳಲ್ಲಿ ವೋಲ್ಟೇಜ್ ಸಮಸ್ಯೆ ಬಗೆಹರಿಸಲು ಸರ್ಕಾರ ಯಾವ ರೀತಿಯ ಕ್ರಮ ವಹಿಸುವುದು;

ಇ) ವೋಲ್ಟೇಜ್ ಸಮಸ್ಯೆ ಬಗೆಹರಿಸಲು ಸರ್ಕಾರ ಕೈಗೊಂಡಿರುವ/ಕೈಗೊಳ್ಳಾಗುವ ಕ್ರಮಗಳೇನು? (ಕಾಮಗಾರಿಯ ಸಂಪೂರ್ಣ ವಿವರಗಳೊಂದಿಗೆ ತಿಳಿಸಿ)

ಶ್ರೀ ಹೆಚ್.ಡಿ. ರೇವಣ್ಣ. (ಲೋಕೋಪಯೋಗಿ ಮತ್ತು ಇಂಧನ ಸಚಿವರು):

ಅ) ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ಸುಧಾರಣಾ ಕಾಮಗಾರಿಗಳನ್ನು ಮೈಸೂರು ನಗರದ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ನಿರ್ವಹಿಸಿದ್ದು, 45 ಹೆಚ್ಚುವರಿ ಪರಿವರ್ತಕಗಳು, 5.744 ಕಿ.ಮೀ ಉದ್ದದ ಹೆಚ್.ಟಿ.ಲೈನು ಹಾಗೂ 3.536 ಕಿ.ಮೀ ಎಲ್.ಟಿ. ಲೈನುಗಳನ್ನು ಹೆಚ್ಚುವರಿಯಾಗಿ ಅಳವಡಿಸಲಾಗಿರುತ್ತದೆ. ಆದುದರಿಂದ, ಈ ವಿಧಾನಸಭೆ ವ್ಯಾಪ್ತಿಯ ಯಾವುದೇ ಬಡಾವಣೆಗಳಲ್ಲಿ ವೋಲ್ಟೇಜ್ ಸಮಸ್ಯೆ ವರದಿಯಾಗಿರುವುದಿಲ್ಲ.

ಆ) ಈ ಮೇಲಿನ ಸುಧಾರಣಾ ಕಾರ್ಯಕ್ರಮಗಳಿಂದ ವೋಲ್ಟೇಜ್ ಸಮಸ್ಯೆ ಬಗೆಹರಿಸಲಾಗಿದೆ. ಯಾವುದಾದರೂ ಮುಖ್ಯ ಸಮಸ್ಯೆ ಬಂದಲ್ಲಿ ಬಗೆಹರಿಸುವ ಬಗ್ಗೆ ಕ್ರಮ ವಹಿಸಲಾಗುತ್ತಿದೆ.

ಇ) ಹೆಚ್ಚುವರಿ ಪರಿವರ್ತಕಗಳ ಅಳವಡಿಕೆ, ಕಡಿಮೆ ಗಾತ್ರದ ವಾಹಕಗಳನ್ನು ಹೆಚ್ಚುವರಿ ಗಾತ್ರದ ವಾಹಕಗಳ ಮೂಲಕ ಬಡಾವಣೆ ಹಾಗೂ ಹೆಚ್ಚಿನ ಲೈನುಗಳನ್ನು ವ್ಯವಸ್ಥೆ ಮಾಡಿ ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮವು ವೋಲ್ಟೇಜ್ ಸಮಸ್ಯೆಯನ್ನು ಬಗೆಹರಿಸುತ್ತಿದೆ.

460 (876) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) :–
ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ನಗರದ ಚಾಮರಾಜ ವಿಧಾನಸಭಾ ಕ್ಷೇತ್ರದ ಯಾವ ಯಾವ ನಗರಪಾಲಿಕೆಗೆ ವಾರ್ಡಗಳಿಗೆ ಯಾವ ಯಾವ ಜಲಸಂಗ್ರಹಗಾರಗಳಿಂದ ಕಾವೇರಿ ನೀರು ಸರಬರಾಜು ಮಾಡಲಾಗುತ್ತಿದೆ;

ಆ) ಚಾಮರಾಜ ವಿಧಾನ ಸಭಾಕ್ಷೇತ್ರದ ಯಾವ ಯಾವ ನಗರಪಾಲಿಕೆ ವಾರ್ಡಿನ ಯಾವ ಯಾವ ಬಡಾವಣೆಯ ಎಷ್ಟೆಷ್ಟು ಮನೆಗಳಿಗೆ ಪೂರ್ಣ ಪ್ರಮಾಣದಲ್ಲಿ ಕಾವೇರಿ ನೀರು ಸರಬರಾಜು ನೀರು ಸರಬರಾಜು ಮಾಡಲಾಗುತ್ತಿದೆ;

ಇ) ಎಷ್ಟೆಷ್ಟು ಮನೆಗಳಿಗೆ ಕಾವೇರಿ ಮತ್ತು ಕೊಳವೆಬಾವಿ ಮಿಶ್ರಿತ ನೀರು ಸರಬರಾಜು ಮಾಡುತ್ತಿದೆ;